**ಓ ಎಸ್ ನಂ. 252/2017**
**ಪಿ ಡಬ್ಲ್ಯೂ: 1**

**ದಿಃ 22.07.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಸಿ.ಬಿ ವಕೀಲರಿಂದಃ**

1. ನಾನು ಮದುವೆಯಾಗಿ ಆರು ವರ್ಷಗಳಾಯಿತು. ನನ್ನ ಗಂಡನ ಹೆಸರು ಕೇಶವಪ್ಪ ಅಂದರೆ ಸರಿ. ಅವರು ಶಿಕ್ಷಕರು ಅಂದರೆ ಸರಿ. ಅವರು ಬಾಗೂರಿನವರು ಅಂದರೆ ಸರಿ. ನಾನು ಮದುವೆಯಾದ ನಂತರ ಬಾಗೂರಿನಲ್ಲಿ ವಾಸವಾಗಿದ್ದೆ ಅಂದರೆ ಸರಿ. ನನ್ನ ತಂದೆ ಯ ಹೆಸರು ರಾಮಪ್ಪ ಮತ್ತು ತಾಯಿ ಚೌಡಮ್ಮ ಅಂದರೆ ಸರಿ. ನಾವು ಮೂರು ಜನ ಅಕ್ಕ ತಂಗಿಯರು ಅಂದರೆ ಸರಿ. ನಾನು ಈ ದಾವೆಯಲ್ಲಿ ನನ್ನ ಸಹೋದರಿಯರಾದ ಮಂಜಮ್ಮ ಮತ್ತು ರತ್ನಮ್ಮರವರ ಹೆಸರುಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಅವರು ಜೀವಂತ ಇದ್ದಾರೆ. ನನಗೆ ಚಂದ್ರಮ್ಮ ಅಂತ ಸೋದರತ್ತೆ ಇದ್ದಾರೆ ಎಂದರೆ ಸರಿ. ದಾವಾ ಸ್ವತ್ತು ನನ್ನ ಮುತ್ತಜ್ಜ ರಾಮಪ್ಪನ ಕಡೆಯಿಂದ ಬಂದಂತಹ ಆಸ್ತಿ ಎಂದರೆ ಸರಿಯಲ್ಲ. ನನ್ನ ಅಜ್ಜ ಚೌಡಪ್ಪನಿಂದ ಬಂದಂತಹ ಆಸ್ತಿ. ಪ್ರತಿವಾದಿ ನನ್ನ ತಂದೆಯ ತಮ್ಮ ಎಂದರೆ ಸರಿ. ದಾವಾ ಸ್ವತ್ತು ಅರಳಿಹಳ್ಳಿಯ ಹತ್ತಿರ ಇರುತ್ತದೆ. ಅದರ ಸರ್ವೆ ನಂಬರ್ ಮತ್ತು ಅದರ ವಿಸ್ತೀರ್ಣ ಗೊತ್ತಿಲ್ಲ. ದಾವಾ ಸ್ವತ್ತಿನ ಪಹಣಿಯನ್ನು ನಾನು ನೋಡಿಲ್ಲ. ದಾವಾಯನ್ನು ಹಾಕಲು ಮಾಹಿತಿಯನ್ನು ನಾವು ಮೂರು ಜನ ಸಹೋದರಿಯರು ಸೇರಿ ಬರೆಸಿದ್ದೇವೆ. ನನ್ನ ಸಹೋದರಿಯರಿಗೂ ನನಗೂ ಏನೂ ದ್ವೇಷ ಇಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ *ಬೆರಳಚ್ಚು* ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೊಸದುರ್ಗ .